ನಮ್ಮನಿಗೆ ಬರೋಕಿಂತಾ ಮದ್ಲ ಯಾವ ಜಾತಿಯಾಂವಿದ್ದಾ… ಹೆಂಗಿದ್ದಾ ಅನ್ನೋದು ಮುಖ್ಯ ಅಲ್ಲಾ. ನಮ್ಮನಿಯಾವ್ರು ಆ ಕೂಸಿನ್ನ ಕರಕೊಂಡು ಬಂದ್ರು ಅನ್ನೋದು ಧೊಡ್ಡದು. ನಮ್ಮನಿಗೆ ಬಂದ ಸಣ್ಣ ಕೂಸಿಗೆ ನಾವು ಸಂಸ್ಕಾರ ಕೊಟ್ಟು ಜಾವಳ, ಮುಂಜಿವಿ, ಮದವಿ ಮಾಡಿದ್ವಿ. ಹಂಗ ಸತ್ತಾಗ ಕರ್ಮ ಮಾಡಿದ್ವಿ. ಈಗ ಶ್ರಾದ್ಧಾನೂ ಮಾಡೋದ" ಎಂದರು ಗಟ್ಟಿಯಾಗಿ.

ಪದ್ಮಳ ಮುಖದಲ್ಲಿ ಮುನಿಸು ಮೂಡಿತು. "ಅತ್ತೆವರ… ನಿಮಗ ವಾಸಣ್ಣ ಭಾವಜಿ ಮ್ಯಾಲೆ ಪ್ರೀತಿ ಭಾಳ. ನಮ್ಮದೇನೂ ಲೆಖ್ಖಿನ ಇಲ್ಲ" ಎಂದಳು. ಭಾಗಕ್ಕ, "ಗಣಪತಿ ಮುಂದ ಕೂತು ಸುಳ್ಳು ಹೇಳೂದುಲ್ಲವಾ. ನನಗ ಯಾರೂ ಹೆಚ್ಚು… ಕಡಿಮಿಲ್ಲ. ವಾಸಣ್ಣ ಎಷ್ಟು ದುಡದಾ… ಅಷ್ಟು ನನ್ನ ಗಂಡನೂ ದುಡದಿಲ್ಲ. ಇಪ್ಪತ್ತೈದು ವರ್ಷ ಮನಿ ಘಟ್ಟೆ ನಡಸಿದಾ. ಕಿಟ್ಟ್ಯಾ ಹೊಲಗೊಳ ಕಡೆ ನೋಡಿದ್ದಾಂದ್ರ ನಾವು ಎಲ್ಲಾ ಮಾರಿ ಹಿಂಗ ಕೂಡೋ ಪಾಳಿ ಬರ್ತಿದ್ದಿಲ್ಲ. ರಾಶಿಗಟ್ಲೆ ಸುರಿತಿದ್ದಾವ್ರು ಈಗ ಚೀಲ ಕಾಳಿಗೆ ಆಶಾಪಡೋಹಂಗಾತು. ವಾಸಣ್ಣ ಕಿಟ್ಟಿಗೆ ಬೈದದ್ದೊಂದ ನಿನಗ ಕಾಣಿಸ್ತು. ಆದರ, ಭೊಲೊದಕ್ಕನ ಅನ್ನೋದು ತಿಳೀಲಿಲ್ಲ. ಅದರ ಪರಿಣಾಮ ಈಗ ಅನಭೋಗಸ್ಲಿಕ್ಕತ್ತೀವಿ ನೋಡು… ಭಂಗಾರದಂಥಾ ಹೊಲಮನಿ ಮಾರಿ…" ಎಂದು ಸೆರಗು ಕಣ್ಣಿಗೊತ್ತಿದರು. "ಹೌದು… ಇವರು ಯಾವುದಕ್ಕೂ ತಲಿ ಹಾಕಲಿಲ್ಲ. ಬರೇ ಆರಾಮಾಗಿ ಕುಶಾಲಚೆಂಡು ಗತೆ ಕೂತು ಉಂಡರು. ಏನ ಮಾಡೋದು? ನನ್ನ ನಶೀಬ" ಎಂದು ಪದ್ಮ ಕಣ್ತುಂಬಿದಳು. ಗಣಪತಿ ಇಬ್ಬರಿಗೂ ಸಾಕ್ಷಿಯಾಗಿದ್ದ. ಭಾಗಕ್ಕನೇ ಸಾವರಿಸಿಕೊಂಡು, "ನೀ ನನ್ನ ಮಗಳಿಗಿಂತ ಹೆಚ್ಚು ಪದ್ಮಾ. ಯಾಕಂದ್ರ ರಕುಮಾಗ ನಾನು… ನನ್ನ ಮಡಿ ಬ್ಯಾಡಾ. ನನಗೇನಿದ್ರೂ ನೀನೂ… ಕಿಟ್ಟೀನವಾ ಮಾಡಾವ್ರು" ಎಂದರು ಸಂತಾಪದಿಂದ. ಕಣ್ಣೊರೆಸಿಕೊಂಡ ಪದ್ಮ, "ಅದೇನಿಲ್ಲರಿ ಅತ್ತೆವರ… ನೀವು ನನಗ ತಾಯಿ ಇದ್ದಂಗ. ನೀವು ಹೇಳ್ರಿ. ತಪ್ಪಿದ್ದಲ್ಲಿ ತಿದ್ದಕೋತೇನಿ. ಇದೊಂದು ಬಿಟ್ಟು…" ಎಂದಳು.

"ಪದ್ಮಾ…" ಎಂದ ಭಾಗಕ್ಕನ ಧ್ವನಿ ಏರಿತು. "ಉಡೇದಾಗ ಕೆಂಡಾ ಇಟಗೊಂಡು ಬದಕಲಿಕ್ಕತ್ತೇನಿ. ಅವನ ಬಗ್ಗೆ ಏನೂ ಹೇಳಬ್ಯಾಡಾ. ನಮ್ಮನಿಗೆ ವಂಶೋದ್ಧಾರಕನ ಕೊಟ್ಟಾನವಾ. ನಿನ್ನ ಉಡೇದಾಗ ಕೂಸಿನ್ನ ಕೊಟ್ಟಾನವಾ" ಎಂದರು. ದಿಗ್ಭ್ರಮೆಗೊಂಡ ಪದ್ಮ ಇನ್ನೂ ಜೋರಾಗಿ, "ಅತ್ತೆವರ… ಏನು ಮಾತಾಡ್ಲಿಕ್ಕತ್ತೀರಿ ಅನ್ನೋ ಖಬರ ಅದಯೇನು ನಿಮಗ? ಅದರ ಅರ್ಥ ಗೊತ್ತದಯೇನು?" ಎಂದು ಅಬ್ಬರಿಸಿದಳು. ಭಾಗಕ್ಕ ಸುತ್ತಲೂ ನೋಡಿ ಧ್ವನಿ ತಗ್ಗಿಸಿ, "ನೆನಪು ಮಾಡಕೋ… ಕಿಟ್ಟಿ ಬಿಜಾಪುರಕ್ಕ ಅತ್ಯಾನ ಮಗನ ಮದವಿಗೆ ಹೋಗಿ ಒಂದು ತಿಂಗಳು ನಿಂತು ತೊರವಿ ನರಸಿಂಹ, ಯಲಗೂರು… ಎಲ್ಲಾ ಅಡ್ಡ್ಯಾಡಕೊಂಡು ಎಲ್ಲಾನ್ರೂ ಕರಕೊಂಡು ಬಂದ ದಿವಸ…" ಎಂದು ನಿಲ್ಲಿಸಿದರು. ಹೌದು… ಅದ್ಹೇಗೆ ಮರೆತಾಳು? ಅಚ್ಚಳಿಯದೆ ನೆನಪಿತ್ತು. ಕೃಷ್ಣ ತಿಂಗಳ ನಂತರ ಬಂದಾಗ ಪದ್ಮಳಿಗೆ ಸಂತಸವಾಗಿತ್ತು. ಹಾಗೇ ನೆಂಟರೊಡನೆ ಹರಟುತ್ತ ಕುಳಿತಾಗ ಬೇಜಾರೂ ಆಗಿತ್ತು. ನಂತರ ಅಟ್ಟದ ಮೇಲೆ ಮಲಗಿದ್ದನ್ನು ನೋಡಿ ಖಚಿತಪಡಿಸಿಕೊಂಡು ಬಂದಿದ್ದಳು. ಸರಿರಾತ್ರಿಯಲ್ಲಿ ಹೋಗಿ ತಣಿದು ಬಂದಿದ್ದಳು. ಆದರೆ, ವಿಚಿತ್ರ ಅನುಭವವಾಗಿತ್ತು. ಅವನ ವರಸೆ ಪೂರ್ತಿ ಬೇರೆಯೇ ಎನಿಸಿತ್ತು. ಮೈಯ ಜೊತೆ ವರ್ತನೆಯೂ ತೀರಾ ಒರಟಾಗಿತ್ತು. ಯುಗಯುಗಾಂತರದಿಂದ ಹಸಿದಂತೆ ವರ್ತಿಸಿದ. ವಿಚಿತ್ರವೆನಿಸಿದರೂ ಊರಿಗೆ ಹೋಗಿ ತಿಂಗಳಾಗಿತ್ತಲ್ಲ ಎಂದು ಸಮಾಧಾನ ಪಟ್ಟುಕೊಂಡಿದ್ದಳು.

"ರಾತ್ರಿ ಇವರು 'ಎದಿನೋವು' ಅಂದರು. ಕಿಟ್ಟಿನ್ನ ಎಬ್ಬಿಸಿಗೊಂಡ ಬಂದೆ. ಅಂವಾ ಇವರ ಎದಿಗೆ ಅಮೃತಾಂಜನ ಹಚ್ಚಿ ತಿಕ್ಕಿದಾ. ಉಪ್ಪಿನ ಕಾವು ಕೊಟ್ಟಾ. ಅವರ ಜೋಡಿನ ಇದ್ದಾ. ನಾ ಬಿಸಿನೀರು ಕಾಸಿಗೊಂಡ ಬರ್ಲಿಕ್ಕೆ ಹೋದಾಗ ನೀ ಬಂದು ಮಲಕೊಂಡಿದ್ದು ನೋಡಿದೆ. ಕಿಟ್ಟಿ ಇಲ್ಲೇ ಇದ್ದಾನಲ್ಲಾ ಅಂತ ವಿಚಾರ ಮಾಡಿದೆ. ಕಿಟ್ಟಿ ಎದ್ದು ಬಂದ ಮ್ಯಾಲೆ ಹೊಲದಿಂದ ರಾಶಿ ಮಾಡಿ ಬಂದು ಅಟ್ಟದ ಮ್ಯಾಲೆ ಮಲಕೊಂಡಾಂವಾ ವಾಸು…" ಎಂದರು ಭಾಗಕ್ಕ. ಜಿಲ್ಲನೆ ಬೆವೆತಳು ಪದ್ಮ. ಹಾಗಾದರೆ